ಈ) 2013–14ನೇ ಸಾಲಿನ ತೆರಿಗೆಯೇತರ ರಾಜಸ್ವ ಸಂಗ್ರಹಣೆಯ ವಿವರ ಕೆಳಗೆ ನೀಡಿದೆ.

(₹ ಕೋಟಿಗಳಲ್ಲಿ)

ಕ್ರ. ಸಂ.	ಇಲಾಖೆ	2013–14 ಆಯವ್ಯಯ ಅಂದಾಜು	ಜನವರಿ 2014ರವರೆಗೆ
III	ತೆರಿಗೇತರ ರಾಜಸ್ವ	4038	2869
1	ಬಡ್ಡಿ ಸ್ವೀಕೃತಿ	400	321
2	ಅರಣ್ಯ ಮತ್ತು ವನ್ಯ ಜೀವಿ	181	126
3	ಕಬ್ಬಿಣೇತರ ಗಣಿ ಮತ್ತು ಲೋಹ ಉದ್ಯಮಗಳು	1750	1049
4	ಇತರೆ ತೆರಿಗೇತರ ರಾಜಸ್ವ	1707	1374

ಕೈಗಾರಿಕಾ ಅಭಿವೃದ್ಧಿ ಯೋಜನೆಗಳು

1254(1625); ಶ್ರೀ ಬಾಲಕೃಷ್ಣ ಸಿ. ಎನ್. (ಶ್ರವಣಬೆಳಗೊಳ)

ಅ) ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಪ್ರದೇಶಗಳಲ್ಲಿ, ಅದರಲ್ಲೂ ಹಿಂದುಳಿದ ಜಿಲ್ಲಾ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ ಪ್ರೋತ್ಸಾಹಿಸಿಸುವ ಕುರಿತಾದ ಸರ್ಕಾರದ ಪ್ರಸ್ತಾವನೆಗಳೇನು;

ಆ) ಕೇಂದ್ರ ಸರ್ಕಾರದ ರಾಷ್ಟ್ರೀಯ ಉತ್ಪಾದನಾ ಬಂಡವಾಳ ಹೂಡಿಕೆ ವಲಯ ಸ್ಥಾಪಿಸಲು ರಾಜ್ಯದಲ್ಲಿ ಕೈಗೊಳ್ಳಲಾಗುವ ಕೈಗಾರಿಕಾ ವಿಸ್ತರಣಾ ಕಾರ್ಯಕ್ರಮಗಳೇನು; ಆ ಮೂಲಕ ಅಭಿವೃದ್ಧಿಪಡಿಸಲಾಗುವ ಜಿಲ್ಲೆಗಳನ್ನು ಗುರುತಿಸಲಾಗಿದೆಯೇ (ವಿವರ ನೀಡುವುದು);

ಇ) ಸರ್ಕಾರವು ನೂತನ ಕೈಗಾರಿಕಾ ನೀತಿಯನ್ನು ಘೋಷಿಸುವಾಗ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಕೈಗಾರಿಕಾ ಅಭಿವೃದ್ಧಿ ಯೋಜನೆಯ ಸೌಲಭ್ಯವನ್ನು ಒದಗಿಸಲು ಕ್ರಮ ಜರುಗಿಸಲಾಗುವುದೇ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಡಾ॥ ನಂಜುಂಡಪ್ಪನವರ ವರದಿ ಪ್ರಕಾರ ರಾಜ್ಯದಲ್ಲಿ 164 ತಾಲ್ಲೂಕುಗಳನ್ನು ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ವರ್ಗೀಕರಿಸಿದ ಡಾ॥ ನಂಜುಂಡಪ್ಪನವರ ವರದಿಯನ್ವಯ ಗುರುತಿಸಲಾಗಿರುವ ಹಿಂದುಳಿದ ತಾಲ್ಲೂಕುಗಳಲ್ಲಿ ಕೆ.ಐ.ಎ.ಡಿ.ಬಿ ಹಾಗೂ ಕೆ.ಎಸ್.ಎಸ್.ಐ.ಡಿ.ಸಿ ಮೂಲಕ ಕೈಗಾರಿಕಾ ಪ್ರದೇಶಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು. ಜಿ.ಟಿ.ಟಿ.ಸಿ ಕೇಂದ್ರಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ವಿಶೇಷ ಅಭಿವೃದ್ಧಿ ಯೋಜನೆ ಹಾಗೂ ಕೈಗಾರಿಕಾ ವಿಕಾಸ ಯೋಜನೆಗಳಡಿ ಅನುದಾನ ನೀಡಲಾಗುತ್ತಿದೆ. ಇದರಿಂದ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲವಾಗುವುದು.

ಮುಂದುವರೆದಂತೆ, ಕೈಗಾರಿಕೆಗಳಿಗೆ ಪ್ರಸ್ತುತ ಚಾಲ್ತಿಯಲ್ಲಿರುವ 2009–14 ಕೈಗಾರಿಕಾ ನೀತಿಯಡಿ ಈ ಕೆಳಕಂಡ ಪ್ರೋತ್ಸಾಹಗಳನ್ನು ನೀಡಲು ಅವಕಾಶವಿರುತ್ತದೆ.

1. ಬಂಡವಾಳ ಹೂಡಿಕೆ ಸಹಾಯಧನ
2. ಮುದ್ರಾಂಕ ಶುಲ್ಕ ವಿನಾಯಿತಿ, ಪ್ರವೇಶ ತೆರಿಗೆ ವಿನಾಯಿತಿ ಭೂ ಪರಿವರ್ತನ ಶುಲ್ಕ ಮರುಪಾವತಿ
3. ವ್ಯಾಟ್ ಪಾವತಿ ಮೇಲೆ ಬಡ್ಡಿ ರಹಿತ ಸಾಲ
4. ತ್ಯಾಜ್ಯ ಸಂಸ್ಕರಣಾ ಯಂತ್ರ ಸ್ಥಾಪನೆಗೆ ಸಹಾಯಧನ
5. ಆಂಕರ್ ಘಟಕ ಸಹಾಯಧನ
6. ರಾಜ್ಯದ ಉದ್ಯೋಗ ಮೀಸಲಾತಿ ನೀತಿಯ ಅನುಷ್ಠಾನಕ್ಕಾಗಿ ಹೆಚ್ಚುವರಿ ಉತ್ತೇಜಕಗಳು

ಆ) ರಾಷ್ಟ್ರೀಯ ಉತ್ಪಾದನಾ ಬಂಡವಾಳ ಹೂಡಿಕೆ ವಲಯ ಸ್ಥಾಪನೆಗಾಗಿ ತುಮಕೂರು ಜಿಲ್ಲೆಯಲ್ಲಿ ಕನಿಷ್ಠ 5,000 ಹೆಕ್ಟೇರ್ ಜಮೀನನ್ನು ಕೆಐಎಡಿಬಿ ಮತಿಯಿಂದ ಸ್ವಾಧೀನಪಡಿಸಲು ದಿನಾಂಕ: 14.12.2012 ರಂದು ಸರ್ಕಾರವು ಆದೇಶ ಹೊರಡಿಸಿದೆ.

ಮೇಲ್ಕಂಡ ಸರ್ಕಾರಿ ಆದೇಶವನ್ನು ಅನುಸರಿಸಿ ತುಮಕೂರು ಜಿಲ್ಲೆಯಲ್ಲಿ ಮಂಡಳಿ ಮತಿಯಿಂದ ವಸಂತನರಸಾಪುರ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸುತ್ತಿರುವ ಒಟ್ಟು 5389.18 ಎಕರೆ ಜಮೀನಿಗೆ ಹೊಂದಿಕೊಂಡಂತೆ ತುಮಕೂರು ಮತ್ತು ಶಿರಾ ತಾಲ್ಲೂಕುಗಳ ವ್ಯಾಪ್ತಿಯಲ್ಲಿನ 3174.25 ಎಕರೆ ಮತ್ತು 4731.38 ಎಕರೆ ಸೇರಿದಂತೆ ಒಟ್ಟು 7906.24 ಎಕರೆ ಜಮೀನನ್ನು ರಾಷ್ಟ್ರೀಯ ಉತ್ಪಾದನಾ ಬಂಡವಾಳ ಹೂಡಿಕೆ ವಲಯ ಸ್ಥಾಪನೆಗಾಗಿ ಸ್ವಾಧೀನಪಡಿಸುವ ಸಂಬಂಧ ಕ್ರಮವಾಗಿ ದಿನಾಂಕ: 26.12.2013 ಮತ್ತು 28.12.2013 ರಂದು ಸರ್ಕಾರಕ್ಕೆ ಕೆಐಎಡಿ ಕಾಯ್ದೆಯಡಿ ಪ್ರಾಥಮಿಕ ಅಧಿಸೂಚನೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ.

ಗುಲ್ಬರ್ಗಾ, ಬೀದರ್ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಮೂರು ಹೊಸ ರಾಷ್ಟ್ರೀಯ ಉತ್ಪಾದನಾ ಬಂಡವಾಳ ಹೂಡಿಕೆ ವಲಯಗಳನ್ನು ಸ್ಥಾಪಿಸಲು ಯೋಜಿಸಲಾಗಿದ್ದು, ತಾತ್ವಿಕ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ.

ಇ) ಹೌದು.